# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1012 |
| ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬರ್<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 25-08-2026 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಮಳೆ ಕೊರತೆ ಹಾಗೂ ನೀರಾವರಿ ಸೌಲಭ್ಯಗಳ ಅಭಾವದಿಂದ ಕೃಷಿ ಉತ್ಪಾದನೆ ಕುಸಿಯುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಜ್ಯದಲ್ಲಿ ಹಿಂದಿನ ವರ್ಷಗಳಲ್ಲಿ ಉತ್ಪಾದಿಸಲಾದ ಒಟ್ಟು ಆಹಾರಧಾನ್ಯಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ವರ್ಷ</th><th>ಆಹಾರಧಾನ್ಯಗಳ ಉತ್ಪಾದನೆ (ಲಕ್ಷ ಟನ್ ಗಳಲ್ಲಿ)</th></tr>
<tr><td>1</td><td>2022-23</td><td>143.56</td></tr>
<tr><td>2</td><td>2023-24</td><td>128.32</td></tr>
<tr><td>3</td><td>2024-25</td><td>151.62</td></tr>
<tr><td>4</td><td>2025-26</td><td>143.83</td></tr>
</table>
ಮೂಲ: 2022-23 ರಿಂದ 2024-25ರವರೆಗೆ ಅಂತಿಮ ಅಂದಾಜು ವರದಿ & 2025-26 3ನೇ ಮುಂಗಡ ಅಂದಾಜು ವರದಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.<br><br>2024-25ನೇ ಸಾಲಿನ ಉತ್ಪಾದನೆಯು 2022-23ನೇ ಸಾಲಿಗೆ ಹೋಲಿಸಿದ್ದಲ್ಲಿ ಏರಿಕೆ ಕಂಡುಬಂದಿರುತ್ತದೆ.</td></tr>
<tr><td>ಆ)</td><td>ಬಂದಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾವಾರು ಎಷ್ಟು ಕೃಷಿ ಭೂಮಿಯಲ್ಲಿ ಬಿತ್ತನೆ ಕೈಬಿಡಲಾಗಿದೆ ಅಥವಾ ಉತ್ಪಾದನೆ ಕುಸಿದಿದೆ ಎಂಬ ವರದಿಯಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)</td><td>ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾವಾರು ಬಿತ್ತನೆಯಾಗದೆ ಇರುವ ವಿಸ್ತೀರ್ಣದ ವಿವರ ಅನುಬಂಧ-1ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ಆಹಾರಧಾನ್ಯಗಳ ಉತ್ಪಾದನೆ ವಿವರವನ್ನು ಅನುಬಂಧ-1(ಅ)ರಲ್ಲಿ ಒದಗಿಸಲಾಗಿದೆ.<br><br>ಬೆಳೆವಾರು ಉತ್ಪಾದನೆಯು ಸದರಿ ವರ್ಷದ ಹವಾಮಾನ ಹಾಗೂ ಕೀಟರೋಗಬಾಧೆ ಇತ್ಯಾದಿಗಳ ಮೇಲೆ ಆಧಾರಿತವಾಗಿದೆ.</td></tr>
</table>

| | | |
|---|---|---|
| ಇ) | ಸದರಿ ಸಮಸ್ಯೆಯನ್ನು ನಿವಾರಿಸಿ ರೈತರ ಕೃಷಿ ಉತ್ಪಾದಕತೆ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ಒದಗಿಸುವುದು) | ರೈತರ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಕೃಷಿ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ.<br><br>ಸೂಕ್ಷ್ಮ ನೀರಾವರಿ:<br><br>ರೈತರ ಕೃಷಿ ಉತ್ಪಾದಕತೆ ಹೆಚ್ಚಿಸಲು ಮತ್ತು ಲಭ್ಯವಿರುವ ನೀರನ್ನು ಮಿತವಾಗಿ ಹಾಗೂ ಸದ್ಬಳಕೆಯಿಂದ ಬಳಸುವಂತೆ ರೈತರಿಗೆ ಪ್ರೋತ್ಸಾಹಿಸಲು ಸರ್ಕಾರವು ಸೂಕ್ಷ್ಮ ನೀರಾವರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಆಧುನಿಕ ಮತ್ತು ಸುಲಭವಾದ ಕೃಷಿ ವ್ಯವಸಾಯಕ್ಕಾಗಿ ರಾಜ್ಯದ ರೈತರಿಗೆ ಸೂಕ್ಷ್ಮ ನೀರಾವರಿ ಘಟಕಗಳಾದ ತುಂತುರು ಮತ್ತು ಹನಿ ನೀರಾವರಿ ಘಟಕಗಳನ್ನು ಸಹಾಯಧನದಲ್ಲಿ ನೀಡಲಾಗುತ್ತಿದೆ.<br><br>ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಶೇ.45-55 ರಷ್ಟು ಸಹಾಯಧನ ನೀಡಲು ಅವಕಾಶವಿರುತ್ತದೆ. ಆದರೆ, ರಾಜ್ಯ ಸರ್ಕಾರವು ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಕೆಯನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರದ ವತಿಯಿಂದ ಶೇ.35 ರಿಂದ 45 ರಷ್ಟು ಹೆಚ್ಚುವರಿ ರಾಜ್ಯದ ಪಾಲಿನ ಸಹಾಯಧನ ಹೊಂದಿಸುವ ಮೂಲಕ ರಾಜ್ಯದ ಎಲ್ಲಾ ವರ್ಗದ ರೈತರಿಗೆ 2.0 ಹೆಕ್ಟೇರ್ ಪ್ರದೇಶದವರೆಗೆ ತುಂತುರು ಮತ್ತು ಹನಿ ನೀರಾವರಿ ಘಟಕಗಳ ಅಳವಡಿಕೆಗೆ ಶೇ.90ರ ಸಹಾಯಧನ ನೀಡಲಾಗುತ್ತಿದೆ.<br><br>ಮುಂದುವರೆದು, ಎಲ್ಲಾ ವರ್ಗದ ರೈತರಿಗೆ 2.0 ಹೆಕ್ಟೇರ್ ಮೇಲ್ಪಟ್ಟು 5.0 ಹೆಕ್ಟೇರ್ ಪ್ರದೇಶದವರೆಗೆ ಶೇ.45ರ ಸಹಾಯಧನ ನೀಡುವ ಮೂಲಕ ಸೂಕ್ಷ್ಮ ನೀರಾವರಿ ತಾಂತ್ರಿಕತೆಗಳ ಅಳವಡಿಕೆಯನ್ನು ಪ್ರೋತ್ಸಾಹಿಸಿ ಕಡಿಮೆ ನೀರಿನಲ್ಲಿ ಹೆಚ್ಚಿನ ಪ್ರದೇಶವನ್ನು ನೀರಾವರಿಗೊಳಪಡಿಸಲು ಮತ್ತು ಬೆಳೆ ವೈಫಲ್ಯಗಳನ್ನು ತಡೆಯಲು ಕ್ರಮವಹಿಸಲಾಗಿದೆ.<br><br>ಕೃಷಿ ಯಾಂತ್ರೀಕರಣ:<br>ರಾಜ್ಯದಲ್ಲಿ ಮಳೆ ಕೊರತೆಯನ್ನು ನಿವಾರಿಸಲು ಮಳೆ ನೀರನ್ನು ಇಂಗಿಸಲು ಉಳಿಮೆ ಮಾಡುವ ಯಂತ್ರೋಪಕರಣಗಳಾದ MB Plough & Disc plough ಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ.<br><br>ಅದೇ ರೀತಿ ಮಳೆ ಕೊರತೆ ಸನ್ನಿವೇಶಗಳಲ್ಲಿ ಬೆಳೆಗಳಿಗೆ ಉಂಟಾಗುವ ತೇವಾಂಶ ಕೊರತೆಯನ್ನು ನೀಗಿಸಲು ಕಡಿಮೆ ಪ್ರಮಾಣದಲ್ಲಿ ಬಿತ್ತನೆ ಬೀಜಗಳನ್ನು ಉಪಯೋಗಿಸಲು ಬೀಜ ಮತ್ತು ರಸಗೊಬ್ಬರ ಕೂರಿಗೆಗಳಿಗೆ ಸಹ ಸಹಾಯಧನ ಒದಗಿಸಲಾಗುತ್ತಿದೆ.<br><br>ತೇವಾಂಶ ಕೊರತೆಯನ್ನು ನಿರ್ವಹಿಸಲು ಕಳೆ ನಿರ್ವಹಣೆ ಮಾಡುವುದು ಅವಶ್ಯಕತೆ ಇರುತ್ತದೆ. ಇದರೊಂದಿಗೆ ಮಣ್ಣಿನಲ್ಲಿರುವ ತೇವಾಂಶವನ್ನು ಆವಿಯಾಗದಂತೆ ತಡೆಯಲು ಮಣ್ಣಿನ ಪದರು (Soil Mulch) ಮಾಡಲು ಅಂತರ ಬೇಸಾಯದ ಅವಶ್ಯಕತೆ ಇರುತ್ತದೆ. |

ಆದ್ದರಿಂದ ಸಮಗ್ರವಾಗಿ ಕಳೆ ನಿರ್ವಹಿಸಿ ಮಣ್ಣಿನ ಪದರು(Soil Mulch) ಮಾಡಲು ಅನುಕೂಲವಾಗುವಂತೆ ಕಳೆ ತೆಗೆಯುವ ಯಂತ್ರಗಳು(Power Weeders) ಮತ್ತು ಟ್ರ್ಯಾಕ್ಟರ್ ಚಾಲಿತ ಅಂತರ ಬೇಸಾಯ ಉಪಕರಣಗಳಿಗೆ ಸಹಾಯಧನ ಒದಗಿಸಲಾಗುತ್ತದೆ.

ಮೇಲ್ಕಂಡ ಎಲ್ಲಾ ಉಪಕರಣಗಳಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ಶೇ.50 ರಿಂದ 90 ರವರೆಗೆ ಸಹಾಯಧನ ನೀಡಲಾಗುತ್ತಿದೆ.

ಬಿತ್ತನೆ ಬೀಜಗಳ ಸಿದ್ಧತೆ:

ಇಲಾಖೆ ಅನುಷ್ಠಾನಗೊಳಿಸುತ್ತಿರುವ ಬಿತ್ತನೆ ಬೀಜಗಳ ಪೂರೈಕೆ ಯೋಜನೆಯಡಿ ಬಿತ್ತನೆ ಬೀಜಗಳನ್ನು ರಾಜ್ಯದ ಎಲ್ಲಾ ವರ್ಗದ ರೈತರಿಗೆ ರಿಯಾಯಿತಿ ದರಗಳಲ್ಲಿ (ಸಾಮಾನ್ಯ ರೈತರಿಗೆ ಶೇ. 50ರವರೆಗೆ ಹಾಗೂ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.75 ರವರೆಗೆ) ಒಟ್ಟಾರೆ ಗರಿಷ್ಠ 2 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ (Actual Holding) ಯಾವುದು ಕಡಿಮೆಯೋ ಆ ವಿಸ್ತೀರ್ಣದ ಮಿತಿಯೊಳಗೆ ವಿತರಣೆ ಮಾಡಲಾಗುತ್ತಿದೆ. 2026ರ ಮುಂಗಾರು ಹಂಗಾಮಿನಲ್ಲಿ ದಿನಾಂಕ: 20.08.2026 ರವರೆಗೆ 2.93 ಲಕ್ಷ ಕ್ವಿಂಟಾಲ್ ಗಳಷ್ಟು ಬಿತ್ತನೆ ಬೀಜಗಳನ್ನು 6.35 ಲಕ್ಷ ರೈತ ಫಲಾನುಭವಿಗಳಿಗೆ ರೈತ ಸಂಪರ್ಕ ಕೇಂದ್ರಗಳ, ಗುರುತಿಸಿದ ಹೆಚ್ಚುವರಿ ಮಾರಾಟ ಕೇಂದ್ರಗಳ ಹಾಗೂ ಆಯ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ರೈತರಿಗೆ ಪೂರೈಸಲಾಗಿದೆ.

ಮಣ್ಣು ಆರೋಗ್ಯ:

ರೈತರ ಜಮೀನುಗಳಲ್ಲಿ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಿ, ಮಣ್ಣು ಪರೀಕ್ಷೆ ಆಧಾರನ್ವಯ ಬೆಳೆಗಳಿಗೆ ಅಗತ್ಯವಿರುವ ಸಾವಯವ ಗೊಬ್ಬರ, ಜೈವಿಕ ಗೊಬ್ಬರ ರಸಗೊಬ್ಬರ ,ಲಘುಪೋಷಕಾಂಶ ಹಾಗೂ ಮಣ್ಣು ಸುಧಾರಕಗಳ ಶಿಫಾರಸ್ಸುಗಳನ್ನು ಒಳಗೊಂಡ ಮಣ್ಣು ಆರೋಗ್ಯ ಮಣ್ಣು ಆರೋಗ್ಯ ಕಾರ್ಡ್ಗಳನ್ನು ಮುದ್ರಿಸಿ ವಿತರಿಸಲಾಗುತ್ತಿದ್ದು, ಮಣ್ಣು ಆರೋಗ್ಯ ಕಾರ್ಡ್ ಶಿಫಾರಸ್ಸಿನನ್ವಯ ಸಮತೋಲನ ರಸಗೊಬ್ಬರಗಳ ಬಳಕೆಯ ಕುರಿತು ತಾಂತ್ರಿಕ ಮಾರ್ಗದರ್ಶನ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ವಿವಿಧ ಯೋಜನೆಗಳಡಿ 43822 ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ಸಾವಯವ ಇಂಗಾಲ ಅಭಿಯಾನ ಯೋಜನೆಯಡಿ ಹಸಿರೆಲೆ ಗೊಬ್ಬರ ಬೀಜ ವಿತರಣೆ ಮಾಡಲಾಗುತ್ತಿದೆ ಹಾಗೂ ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಯೋಜನೆಯಡಿ ಜೈವಿಕ ಪರಿಕರಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಇದರಿಂದ, ಮಣ್ಣಿನ ಫಲವತ್ತತೆಯನ್ನು ಕಾಪಾಡುವುದರ ಜೊತೆಗೆ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಸಹಕಾರಿಯಾಗಿರುತ್ತದೆ.

| | | |
|---|---|---|
| | | ರಾಷ್ಟ್ರೀಯ ಆಹಾರ ಭದ್ರತೆ ಹಾಗೂ ಪೌಷ್ಠಿಕ ಅಭಿಯಾನ ಯೋಜನೆ(NFSNM):<br>ಅಕ್ಕಿ, ಒರಟುಧಾನ್ಯ, ನ್ಯೂಟ್ರಿಸಿರಿಧಾನ್ಯ ಮತ್ತು ಕಬ್ಬು ಬೆಳೆಗಳಲ್ಲಿ ಉತ್ಪಾದಕತೆ ಹೆಚ್ಚಿಸಲು ಸದರಿ ಯೋಜನೆಯಡಿ ರೋಗನಿರೋಧಕ, ಬರಸಹಿಷ್ಣುತೆಯುಳ್ಳ ಮತ್ತು ಬಯೋಫೋರ್ಟಿಫೈಡ್ ನವೀನ ತಳಿಗಳ ಬಳಕೆಯಿಂದ ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ಔಷಧಿಗಳು ಮತ್ತು ಜಿಪ್ಸಂ / ಕೃಷಿ ಸುಣ್ಣ ಪರಿಕರಗಳನ್ನು ಶೇ.50ರ ಸಹಾಯಧನದಡಿ ವಿತರಿಸಲಾಗುತ್ತಿದೆ.<br><br>ದ್ವಿದಳಧಾನ್ಯಗಳಲ್ಲಿ ಆತ್ಮನಿರ್ಭರತೆ ಅಭಿಯಾನ (MAP):<br>ಮಳೆಯಾಶ್ರಿತ ಪ್ರದೇಶದಲ್ಲಿ ಮುಖ್ಯವಾಗಿ ಬೆಳೆಯುತ್ತಿರುವ ತೊಗರಿ, ಉದ್ದು, ಹೆಸರು, ಅಲಸಂದೆ, ಅವರೆ, ಕಡಲೆ ಮುಂತಾದ ದ್ವಿದಳಧಾನ್ಯ ಬೆಳೆಗಳ ಉತ್ಪಾದಕತೆ ಹೆಚ್ಚಿಸಲು ಪ್ರಾತ್ಯಕ್ಷಿಕೆಗಳ ಆಯೋಜನೆಯಡಿ ಹೆಚ್ಚಿನ ಇಳುವರಿ ನೀಡುವ, ಹವಾಮಾನ ಬದಲಾವಣೆ ಮತ್ತು ಕೀಟ/ ರೋಗ ನಿರೋಧಕ ಜೈವಿಕ-ಬಲವರ್ಧಿತ ತಳಿಗಳನ್ನು (5 ವರ್ಷಕ್ಕಿಂತ ಕಡಿಮೆ ವಯಸ್ಸಿನ ತಳಿಗಳನ್ನು) ಮತ್ತು ಅಸ್ತಿತ್ವದಲ್ಲಿರುವ ಪ್ರಮುಖ ತಳಿಗಳಿಗಿಂತ ಉತ್ತಮ ಕಾರ್ಯಕ್ಷಮತೆಯನ್ನು ಹೊಂದಿರುವ ತಳಿಗಳ ಅಳವಡಿಕೆಯನ್ನು ರೈತರಲ್ಲಿ ಉತ್ತೇಜಿಸಲು ಕೃಷಿ ವಿಜ್ಞಾನ ಕೇಂದ್ರಗಳಿಂದ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು ಹಾಗೂ ರಾಜ್ಯ ಕೃಷಿ ಇಲಾಖೆಯಿಂದ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುತ್ತದೆ.<br><br>ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಎಣ್ಣೆಕಾಳು(NMEO-OS): ಸದರಿ ಯೋಜನೆಯಡಿ ಮೌಲ್ಯ ಸರಪಳಿ ಗುಚ್ಛ ಪ್ರಾತ್ಯಕ್ಷಿಕೆ ಆಯೋಜನೆಯಡಿ ನೂತನವಾಗಿ ಬಿಡುಗಡೆಯಾದ ಕೀಟ/ ರೋಗ ನಿರೋಧಕ ಮತ್ತು ಸುಧಾರಿತ 8 ವರ್ಷದೊಳಗಿನ ತಳಿಗಳ ಬಿತ್ತನೆ ಬೀಜಗಳನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ಮುಂದುವರೆದು ಎಣ್ಣೆಕಾಳು ಬೆಳೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಸಹಾಯಧನದ ದರದನ್ವಯ ಆಯೋಜನೆ ಮಾಡಲಾಗುತ್ತಿದೆ.<br><br>ಕೃಷಿ ಭಾಗ್ಯ ಯೋಜನೆ:<br><br>ರಾಜ್ಯದಲ್ಲಿ ಅನಿಶ್ಚಿತ ಮಳೆಯಾಶ್ರಿತ ಮಳೆಯಿಂದಾಗಿ, ಪ್ರದೇಶಗಳಲ್ಲಿ ಕೃಷಿಯನ್ನು ಸುಸ್ಥಿರಗೊಳಿಸಿ, ಬೆಳೆ ಉತ್ಪಾದಕತೆ ಹಾಗೂ ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶದೊಂದಿಗೆ ಕೃಷಿ ಭಾಗ್ಯ ಯೋಜನೆಯನ್ನು 2023-24ನೇ ಸಾಲಿನಲ್ಲಿ ಮರು ಜಾರಿಗೊಳಿಸಲಾಗಿರುತ್ತದೆ.<br><br>ಸದರಿ ಯೋಜನೆಯಡಿ ಫಲಾನುಭವಿಗಳಿಗೆ ಕೃಷಿ ಹೊಂಡ ಹಾಗೂ ಪೂರಕ ಘಟಕಗಳನ್ನು ಪ್ಯಾಕೇಜ್ ಮಾದರಿಯಲ್ಲಿ ಸಹಾಯಧನದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು, ಇದರಿಂದ |

| | | |
|---|---|---|
| | | ರೈತರ ಜಮೀನಿನಿಂದ ಹರಿದು ಹೋಗುವ ಹೆಚ್ಚುವರಿ ಮಳೆ ನೀರನ್ನು ಕೃಷಿ ಹೊಂಡದಲ್ಲಿ ಸಂಗ್ರಹಿಸಿ, ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ನೀರಾವರಿ ನೀಡಲು ಬಳಕೆ ಮಾಡಬಹುದಾಗಿರುತ್ತದೆ.<br><br>ಈ ಮೂಲಕ ಮಳೆ ಕೊರತೆಯಾದಾಗ ಬೆಳೆಯನ್ನು ಕಾಪಾಡಿಕೊಳ್ಳಲು ಮತ್ತು ಅಂದಾಜು 20-30% ರಷ್ಟು ಹೆಚ್ಚುವರಿ ಇಳುವರಿ ಪಡೆಯಲು ನೆರವಾಗುತ್ತದೆ.<br><br>ರಸಗೊಬ್ಬರ :<br><br>2026ನೇ ಸಾಲಿನ ಮುಂಗಾರು ಹಂಗಾಮಿಗೆ ರಾಜ್ಯದ ಒಟ್ಟು 30.05 ಲಕ್ಷ ಮೆ.ಟನ್ ವಿವಿಧ ಗ್ರೇಡ್‌ನ ರಸಗೊಬ್ಬರಗಳ ಬೇಡಿಕೆಗೆ, ದಿನಾಂಕ 20.08.2026 ರವರೆಗೆ ಒಟ್ಟು 31.37 ಲಕ್ಷ ಮೆ.ಟನ್ ಸರಬರಾಜಾಗಿದ್ದು(ಆರಂಭಿಕ ಶಿಲ್ಕು 11.54 ಲಕ್ಷ ಮೆ.ಟನ್ ಒಳಗೊಂಡಂತೆ), 19.13 ಲಕ್ಷ ಮೆ.ಟನ್ ಮಾರಾಟವಾಗಿ 12.24 ಲಕ್ಷ ಮೆ.ಟನ್ ವಿವಿಧ ಶ್ರೇಣಿಯ ರಸಗೊಬ್ಬರಗಳ ದಾಸ್ತಾನಿದ್ದು, ರಸಗೊಬ್ಬರಗಳ ಸರಬರಾಜು ಪ್ರಕ್ರಿಯೆ ಜಾರಿಯಲ್ಲಿದ್ದು, ರಸಗೊಬ್ಬರದ ಯಾವುದೇ ಕೊರತೆ ಇರುವುದಿಲ್ಲ.<br><br>ರಸಗೊಬ್ಬರದ ತೀವ್ರ ಬೇಡಿಕೆಯ ಸಮಯದಲ್ಲಿ ರೈತರಿಗೆ ರಸಗೊಬ್ಬರವನ್ನು ಒದಗಿಸುವ ನಿಟ್ಟಿನಲ್ಲಿ ಕಾಪು ದಾಸ್ತಾನಡಿ 1.03 ಲಕ್ಷ ಮೆ.ಟನ್ ವಿವಿಧ ಗ್ರೇಡ್‌ನ ರಸಗೊಬ್ಬರ ದಾಸ್ತಾನಿರುತ್ತದೆ.<br><br>ಮುಂದುವರೆದು, ರಸಗೊಬ್ಬರಗಳ ಸಮತೋಲನಾತ್ಮಕ ಬಳಕೆಯನ್ನು ಉತ್ತೇಜಿಸಲು ಮಣ್ಣು ವಿಶ್ಲೇಷಣಾ ವರದಿಯನ್ವಯ ಇಲಾಖೆಯ ವಿವಿಧ ಯೋಜನೆಗಳಡಿ ರೈತ ಸಂಪರ್ಕ ಕೇಂದ್ರಗಳ ಮೂಲಕ ಲಘುಪೋಷಕಾಂಶಗಳು, ಲಘುಪೋಷಕಾಂಶ ಮಿಶ್ರಣಗಳು, ಜೈವಿಕ ಮತ್ತು ಸಾವಯವ ಗೊಬ್ಬರಗಳು, ಹಸಿರೆಲೆ ಗೊಬ್ಬರ ಬೀಜಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದೆ.<br><br>ಬೆಳೆಗಳಲ್ಲಿ ಬರ ನಿರೋಧಕತೆಯನ್ನು ಹೆಚ್ಚಿಸಲು ಪೊಟ್ಯಾಷ್ ರಸಗೊಬ್ಬರದ ಬಳಕೆ ಮತ್ತು ಮಣ್ಣಿನಲ್ಲಿ ಹೆಚ್ಚು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಲು ಹೆಚ್ಚಿನ ಪ್ರಮಾಣದಲ್ಲಿ ಸಾವಯವ ಗೊಬ್ಬರಗಳನ್ನು ಮಣ್ಣಿಗೆ ಸೇರಿಸಲು ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ. |
| ಈ) | ಕಳೆದ ಮೂರು ವರ್ಷಗಳಲ್ಲಿ ನೀರಾವರಿ ಸೌಲಭ್ಯವಿಲ್ಲದ ಕೃಷಿ ಪ್ರದೇಶಗಳಲ್ಲಿ ಹನಿ ನೀರಾವರಿ, ತುಂತುರು ನೀರಾವರಿ ಹಾಗೂ ಕೃಷಿ ಕೆರೆಗಳ ನಿರ್ಮಾಣಕ್ಕೆ ಎಷ್ಟು | ಕಳೆದ ಮೂರು ವರ್ಷಗಳಲ್ಲಿ ನೀರಾವರಿ ಮೂಲ ಹೊಂದಿರುವ ಕೃಷಿ ಜಮೀನುಗಳಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಪದ್ಧತಿ ಅಳವಡಿಕೆಗೆ ಕೃಷಿ ಇಲಾಖೆಯಿಂದ ಒಟ್ಟು ರೂ.1,46,733.88 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. |

| | | |
|---|---|---|
| | ಅನುದಾನ ಬಿಡುಗಡೆ ಮಾಡಲಾಗಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು) | ಮುಂದುವರೆದು, ಬಿಡುಗಡೆ ಮಾಡಲಾಗಿರುವ ರೂ.1,46,733.88 ಲಕ್ಷಗಳ ಪೈಕಿ ರೂ.1,35,982.12 ಲಕ್ಷಗಳನ್ನು ಬಳಕೆ ಮಾಡಿ 6.51 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹನಿ ಮತ್ತು ತುಂತುರು (ಸೂಕ್ಷ್ಮ ನೀರಾವರಿ) ನೀರಾವರಿ ಪದ್ಧತಿ ಅಳವಡಿಸಿ 6.48 ಲಕ್ಷ ರೈತ ಫಲಾನುಭವಿಗಳಿಗೆ ಯೋಜನೆಯ ಸವಲತ್ತು ನೀಡಲಾಗಿದೆ.<br><br>ವರ್ಷವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.<br><br>ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನದಲ್ಲಿರುವ ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ 2.0 (WDC-PMKSY 2.0) ಮತ್ತು ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಯ ಉತ್ಪಾದನಾ ಘಟಕದಡಿ ಯೋಜನಾ ಪ್ರದೇಶದ ರೈತರಿಗೆ ತುಂತುರು ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ರೂ.1569.80 ಲಕ್ಷಗಳ ವೆಚ್ಚದಲ್ಲಿ ಒಟ್ಟಾರೆ 6911 ಹೆ.ರಷ್ಟು ತುಂತುರು ನೀರಾವರಿ ಘಟಕ ಸೌಲಭ್ಯವನ್ನು 6513 ರೈತ ಫಲಾನುಭವಿಗಳಿಗೆ ಒದಗಿಸಲಾಗಿದೆ.<br><br>ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನದಲ್ಲಿರುವ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚರಗಳು (PMKSY-OI), ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ 2.0 (WDC-PMKSY 2.0) ಮತ್ತು ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಗಳಡಿ ಒಟ್ಟು 6835 ಕೃಷಿ ಹೊಂಡಗಳನ್ನು ರೂ. 3601.83 ಲಕ್ಷಗಳ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗಿದೆ.<br>ವರ್ಷವಾರು, ಯೋಜನಾವಾರು ಮಾಹಿತಿಯನ್ನು ಅನುಬಂಧ-3ಲ್ಲಿ ಒದಗಿಸಲಾಗಿದೆ. |

ಸಂಖ್ಯೆ: AGRI/214/ACT/2026

**(ಪಿ. ಎಂ. ನರೇಂದ್ರ ಸ್ವಾಮಿ)**

ಕೃಷಿ ಸಚಿವರು

## ಅನುಬಂಧ-1 (ಎಲ್.ಸಿ.ಕ್ಯೂ-874(1012))

## 2023-24 ರಿಂದ 2025-26ನೇ ಸಾಲಿನ ಜಿಲ್ಲಾವಾರು ಬಿತ್ತನೆ ಆಗದೆ ಉಳಿದಿರುವ ವಿಸ್ತೀರ್ಣದ ವಿವರ

ವಿಸ್ತೀರ್ಣ ಲಕ್ಷ ಹೆಕ್ಟೇರ್ ಗಳಲ್ಲಿ

| ಕ್ರ.ಸಂ. | ಜಿಲ್ಲೆ | 2023-24 | | | 2024-25 | | | 2025-26 | | |
|---|---|---|---|---|---|---|---|---|---|---|
| | | ಗುರಿ | ಬಿತ್ತನೆಯಾದ ವಿಸ್ತೀರ್ಣ | ಬಿತ್ತನೆ ಆಗದೆ ಉಳಿದಿರುವ ವಿಸ್ತೀರ್ಣ | ಗುರಿ | ಬಿತ್ತನೆಯಾದ ವಿಸ್ತೀರ್ಣ | ಬಿತ್ತನೆ ಆಗದೆ ಉಳಿದಿರುವ ವಿಸ್ತೀರ್ಣ | ಗುರಿ | ಬಿತ್ತನೆಯಾದ ವಿಸ್ತೀರ್ಣ | ಬಿತ್ತನೆ ಆಗದೆ ಉಳಿದಿರುವ ವಿಸ್ತೀರ್ಣ |
| 1 | ಬಾಗಲಕೋಟೆ | 5.80 | 5.16 | -0.63 | 6.28 | 6.20 | -0.08 | 5.81 | 6.20 | 0.39 |
| 2 | ಬಳ್ಳಾರಿ | 3.07 | 1.91 | -1.15 | 2.84 | 2.57 | -0.27 | 2.61 | 2.16 | -0.45 |
| 3 | ಬೆಳಗಾವಿ | 10.94 | 12.05 | 1.11 | 11.25 | 13.14 | 1.89 | 11.73 | 11.94 | 0.21 |
| 4 | ಬೆಂಗಳೂರು ಗ್ರಾಮಾಂತರ | 0.71 | 0.73 | 0.02 | 0.70 | 0.70 | 0.00 | 0.68 | 0.69 | 0.01 |
| 5 | ಬೆಂಗಳೂರು ನಗರ | 0.23 | 0.20 | -0.03 | 0.23 | 0.19 | -0.03 | 0.21 | 0.21 | 0.00 |
| 6 | ಬೀದರ್ | 5.46 | 5.31 | -0.15 | 5.62 | 5.23 | -0.39 | 5.79 | 5.83 | 0.05 |
| 7 | ಚಾಮರಾಜನಗರ | 1.55 | 1.20 | -0.35 | 1.43 | 1.31 | -0.11 | 1.39 | 1.14 | -0.24 |
| 8 | ಚಿಕ್ಕಬಳ್ಳಾಪುರ | 1.61 | 1.34 | -0.26 | 1.43 | 1.37 | -0.07 | 1.47 | 1.25 | -0.22 |
| 9 | ಚಿಕ್ಕಮಗಳೂರು | 1.17 | 0.95 | -0.22 | 1.16 | 0.89 | -0.27 | 1.08 | 0.95 | -0.13 |
| 10 | ಚಿತ್ರದುರ್ಗ | 3.56 | 3.76 | 0.20 | 3.98 | 3.84 | -0.13 | 3.98 | 3.70 | -0.28 |
| 11 | ದಕ್ಷಿಣ ಕನ್ನಡ | 0.12 | 0.05 | -0.06 | 0.12 | 0.04 | -0.08 | 0.11 | 0.11 | 0.00 |
| 12 | ದಾವಣಗೆರೆ | 3.16 | 2.41 | -0.75 | 3.09 | 2.67 | -0.42 | 3.03 | 2.85 | -0.18 |
| 13 | ಧಾರವಾಡ | 4.64 | 4.74 | 0.11 | 4.76 | 5.42 | 0.66 | 4.99 | 5.01 | 0.02 |
| 14 | ಗದಗ | 5.77 | 4.52 | -1.25 | 5.75 | 5.52 | -0.23 | 5.82 | 5.75 | -0.07 |
| 15 | ಹಾಸನ | 2.65 | 3.00 | 0.35 | 2.71 | 2.91 | 0.20 | 2.64 | 2.48 | -0.16 |
| 16 | ಹಾವೇರಿ | 4.74 | 5.21 | 0.46 | 4.74 | 5.29 | 0.55 | 4.78 | 4.57 | -0.20 |
| 17 | ಕಲಬುರಗಿ | 11.28 | 9.55 | -1.73 | 11.00 | 9.50 | -1.50 | 10.60 | 11.10 | 0.50 |
| 18 | ಕೊಡಗು | 0.32 | 0.16 | -0.16 | 0.32 | 0.14 | -0.18 | 0.31 | 0.23 | -0.07 |
| 19 | ಕೋಲಾರ | 1.11 | 0.73 | -0.38 | 1.04 | 0.81 | -0.23 | 0.80 | 0.86 | 0.05 |
| 20 | ಕೊಪ್ಪಳ | 5.52 | 4.93 | -0.58 | 5.56 | 6.21 | 0.64 | 5.71 | 5.92 | 0.21 |
| 21 | ಮಂಡ್ಯ | 2 75 | 2.33 | -0.42 | 2.46 | 2.83 | 0.37 | 2.58 | 2.53 | -0.05 |
| 22 | ಮೈಸೂರು | 4.88 | 4.04 | -0.84 | 4.71 | 4.29 | -0.42 | 4.60 | 4.41 | -0.19 |
| 23 | ರಾಯಚೂರು | 7 74 | 7.11 | -0.63 | 7.88 | 6.83 | -1.05 | 7.94 | 7.24 | -0.70 |
| 24 | ಬೆಂಗಳೂರು ದಕ್ಷಿಣ | 0.95 | 0.85 | -0.10 | 0.94 | 0.85 | -0.09 | 0.84 | 0.80 | -0.04 |
| 25 | ಶಿವಮೊಗ್ಗ | 1.51 | 1.18 | -0.33 | 1.46 | 1.14 | -0.32 | 1.48 | 1.30 | -0.19 |
| 26 | ತುಮಕೂರು | 3.25 | 2.96 | -0.28 | 3.30 | 2.98 | -0.33 | 3.06 | 3.01 | -0.05 |
| 27 | ಉಡುಪಿ | 0.48 | 0.39 | -0.09 | 0.47 | 0.30 | -0.17 | 0.45 | 0.36 | -0.09 |
| 28 | ಉತ್ತರಕನ್ನಡ | 0.78 | 0.70 | -0.08 | 0.76 | 0.71 | -0.05 | 0.76 | 0.70 | -0.07 |
| 29 | ವಿಜಯನಗರ | 3.69 | 3.96 | 0.27 | 3.75 | 4.12 | 0.37 | 3.71 | 4.03 | 0.32 |
| 30 | ವಿಜಯಪುರ | 9.79 | 8.50 | -1.30 | 9.72 | 9.25 | -0.47 | 10.09 | 10.12 | 0.03 |
| 31 | ಯಾದಗಿರಿ | 5.05 | 4.12 | -0.94 | 5.03 | 4.81 | -0.22 | 5.34 | 5.24 | -0.10 |
| | **ರಾಜ್ಯ** | **114.27** | **104.09** | **-10.19** | **114.49** | **112.05** | **-2.44** | **114.40** | **112.70** | **-1.70** |

ಷರಾ: 2023-24 ಹಾಗೂ 2024-25 ಅಂತಿಮ ಅಂದಾಜು ವರದಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ. 2025-26ನೇ ಸಾಲಿನ ವಿಸ್ತೀರ್ಣವು ವಾರಾಂತ್ಯದಲ್ಲಿ ಕ್ರೋಢೀಕರಿಸಿದ ಬಿತ್ತನೆ ವಿವರ

**ಅನುಬಂಧ-1(ಅ) (ಎಲ್.ಸಿ.ಕ್ಯೂ-874(1012))**

**2023-24 ರಿಂದ 2025-26ನೇ ಸಾಲಿನ ಬೆಳೆವಾರು ಉತ್ಪಾದನೆಯ ವಿವರ**

ಉತ್ಪಾದನೆ ಲಕ್ಷ ಟನ್ ಗಳಲ್ಲಿ

| ಕ್ರ.ಸಂ. | ಬೆಳೆಗಳು | 2023-24 | 2024-25 | 2025-26 |
|---|---|---|---|---|
| | ಭತ್ತ | 46.90 | 59.49 | 56.23 |
| 1 | ಅಕ್ಕಿ | 31.27 | 39.49 | 37.49 |
| 2 | ಜೋಳ | 9.96 | 8.15 | 6.65 |
| 3 | ರಾಗಿ | 10.35 | 13.59 | 14.74 |
| 4 | ಮುಸುಕಿನಜೋಳ | 56.31 | 66.79 | 65.48 |
| 5 | ಸಜ್ಜೆ | 1.63 | 1.53 | 1.30 |
| 6 | ಗೋಧಿ | 1.90 | 2.04 | 2.38 |
| 7 | ತೃಣಧಾನ್ಯಗಳು | 0.22 | 0.74 | 0.28 |
| | **ಒಟ್ಟು ಏಕದಳಧಾನ್ಯಗಳು** | **111.64** | **132.22** | **128.32** |
| 1 | ತೊಗರಿ | 10.19 | 9.98 | 7.30 |
| 2 | ಕಡಲೆ | 3.86 | 4.05 | 3.96 |
| 3 | ಹುರುಳಿ | 0.81 | 1.05 | 0.88 |
| 4 | ಉದ್ದು | 0.22 | 0.61 | 0.50 |
| 5 | ಹೆಸರು | 0.93 | 2.80 | 2.15 |
| 6 | ಅವರೆ | 0.20 | 0.24 | 0.24 |
| 7 | ಅಲಸಂದೆ | 0.46 | 0.51 | 0.47 |
| 8 | ಇತರೆ ದ್ವಿದಳ ಧಾನ್ಯಗಳು | | | |
| | **ಒಟ್ಟು ದ್ವಿದಳಧಾನ್ಯಗಳು** | **16.67** | **19.24** | **15.50** |
| | **ಒಟ್ಟು ಆಹಾರಧಾನ್ಯಗಳು** | **128.32** | **151.57** | **143.83** |

ಮೂಲ: 2023-24 ಹಾಗೂ 2024-25 ಅಂತಿಮ ಅಂದಾಜು ವರದಿ ಹಾಗೂ 2025-26 3ನೇ ಮುಂಗಡ ಅಂದಾಜು ವರದಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.

## ಅನುಬಂಧ - 2 (ಎಲ್.ಸಿ.ಕ್ಯೂ 874(1012))

**ಕೃಷಿ ಇಲಾಖೆ ವತಿಯಿಂದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ಹನಿ ಮತ್ತು ತುಂತುರು ನೀರಾವರಿಗಾಗಿ ಕಳೆದ ಮೂರು ವರ್ಷಗಳಲ್ಲಿ (2023-24 ನೇ ಸಾಲಿನಿಂದ 2025-26 ನೇ ಸಾಲಿನವರೆಗೆ) ಬಿಡುಗಡೆ ಮಾಡಿರುವ ಮತ್ತು ಬಳಕೆ ಮಾಡಿರುವ ಅನುದಾನದ ವಿವರ (ಭೌತಿಕ: ಹೆಕ್ಟೇರ್ ಗಳಲ್ಲಿ, ಆರ್ಥಿಕ: ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ವರ್ಷ | ಬಿಡುಗಡೆಯಾದ ಅನುದಾನ | ಬಳಕೆ ಮಾಡಿರುವ ಅನುದಾನ | ಭೌತಿಕ ಪ್ರಗತಿ (ಹೆಕ್ಟೇರ್ ಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|---|---|
| 1 | 2023-24 | 47077.29 | 42312.20 | 217802.27 | 213449 |
| 2 | 2024-25 | 55701.91 | 49985.27 | 253349.63 | 252776 |
| 3 | 2025-26 | 43954.68 | 43684.65 | 180117.57 | 182197 |
| **ಒಟ್ಟು** | | **146733.88** | **135982.12** | **651269.47** | **648422** |

ಅನುಬಂಧ -3 (LCQ-1012)

**ಕಳೆದ ಮೂರು ವರ್ಷಗಳಲ್ಲಿ ನೀರಾವರಿ ಸೌಲಭ್ಯವಿಲ್ಲದ ಕೃಷಿ ಪ್ರದೇಶಗಳಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ವಿವಿಧ ಯೋಜನೆಗಳಡಿ ತುಂತುರು ನೀರಾವರಿ ಸೌಲಭ್ಯ ಒದಗಿಸಿರುವುದರ ಹಾಗೂ ಕೃಷಿ ಹೊಂಡ ನಿರ್ಮಾಣದ ವರ್ಷವಾರು ಯೋಜನಾವಾರು ವಿವರ**

| ಕ್ರ. ಸಂ | ಯೋಜನೆ | ತುಂತುರು ನೀರಾವರಿ ಘಟಕ ಸೌಲಭ್ಯ | | | | | | | | | | | |
|---|---|---|---|---|---|---|---|---|---|---|---|---|---|
| | | 2023-24 | | | 2024-25 | | | 2025-26 | | | ಒಟ್ಟು | | |
| | | ಪ್ರಮಾಣ (ಹೆ.) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ | ಪ್ರಮಾಣ (ಹೆ.) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ | ಪ್ರಮಾಣ (ಹೆ.) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ | ಪ್ರಮಾಣ (ಹೆ.) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ |
| 1 | ಜಲಾನಯನ ಅಭಿವೃದ್ಧಿ ಘಟಕ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ -2.0 (WDC-PMKSY -2.0) | 5109 | 1159.25 | 4711 | 523 | 114.61 | 523 | 46 | 10.16 | 46 | **5678** | **1284.02** | **5280** |
| 2 | ವಿಶ್ವಬ್ಯಾಂಕ್ ನೆರವಿನ REWARD ಯೋಜನೆ | 0 | 0 | 0 | 997 | 231.33 | 997 | 236 | 54.45 | 236 | **1233** | **285.78** | **1233** |
| | **ಒಟ್ಟು** | **5109** | **1159.25** | **4711** | **1520** | **345.94** | **1520** | **282** | **64.61** | **282** | **6911** | **1569.8** | **6513** |

| ಕ್ರ. ಸಂ | ಯೋಜನೆ | ಕೃಷಿ ಹೊಂಡ ನಿರ್ಮಾಣದ ವಿವರ | | | | | | | | | | | |
|---|---|---|---|---|---|---|---|---|---|---|---|---|---|
| | | 2023-24 | | | 2024-25 | | | 2025-26 | | | ಒಟ್ಟು | | |
| | | ಕೃಷಿ ಹೊಂಡಗಳ ಸಂಖ್ಯೆ | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ | ಕೃಷಿ ಹೊಂಡಗಳ ಸಂಖ್ಯೆ | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ | ಕೃಷಿ ಹೊಂಡಗಳ ಸಂಖ್ಯೆ | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ | ಕೃಷಿ ಹೊಂಡಗಳ ಸಂಖ್ಯೆ | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿ ಗಳ ಸಂಖ್ಯೆ |
| 1 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ - ಇತರ ಉಪಚಾರಗಳು (PMKSY-OI-PDMC) | **3388** | **1353.68** | **3388** | **1438** | **569.64** | **1438** | **616** | **329.17** | **616** | **5442** | **2252.49** | **5442** |
| 2 | ಜಲಾನಯನ ಅಭಿವೃದ್ಧಿ ಘಟಕ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ -2.0 (WDC-PMKSY -2.0) | 129 | 75.11 | 129 | 19 | 13.74 | 19 | 42 | 50.15 | 42 | **190** | **139** | **190** |
| 3 | ವಿಶ್ವಬ್ಯಾಂಕ್ ನೆರವಿನ REWARD ಯೋಜನೆ | 38 | 21.37 | 38 | 312 | 314.75 | 312 | 853 | 874.22 | 853 | **1203** | **1210.34** | **1203** |
| | **ಒಟ್ಟು** | **3555** | **1450.16** | **3555** | **1769** | **898.13** | **1769** | **1511** | **1253.54** | **1511** | **6835** | **3601.83** | **6835** |